ಸುದ್ದಿ ಸಿಂಚನ

ಪೌರಾಣಿಕ ನಾಟಕಗಳನ್ನು ಉಳಿಸಿ ಬೆಳೆಸಿ: ವಕೀಲ ಹನುಮಂತೇಗೌಡ ಕರೆ

ದಾಬಸ್‌ಪೇಟೆ : ದೃಶ್ಯ ಮಾಧ್ಯಮದ ವ್ಯಾಮೋಹ ಹಾಗೂ ಧಾರಾವಾಹಿಗಳಿಗೆ ಜನರು ಹೆಚ್ಚು ಒತ್ತು ಕೊಡುತ್ತಿದ್ದು, ಪೌರಾಣಿಕ ನಾಟಕಗಳು ನಶಿಸುತ್ತಿವೆ. ಪೌರಾಣಿಕ ನಾಟಕಗಳನ್ನು ಉಳಿಸಿ, ಬೆಳೆಸಿದಾಗ ಮನುಷ್ಯನ ಮನಸ್ಸು ಪರಿವರ್ತನೆ ಸಾಧ್ಯ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ವಕೀಲ ಹನುಮಂತೇಗೌಡ ತಿಳಿಸಿದರು.ಸೋಂಪುರ ಹೋಬಳಿಯ ಗುಂಡೇನಹಳ್ಳಿ ಗ್ರಾಮದ ಶ್ರೀ ಅಭ್ಯಯ ಆಂಜನೇಯ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಆಯೋಜನೆ ಮಾಡಿದ್ದ ಕುರುಕ್ಷೇತ್ರ ಅಥವಾ ಶ್ರೀಕೃಷ್ಣ ಸಂಧಾನ ನಾಟಕದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ಪೌರಾಣಿಕ ನಾಟಕಗಳು ಭಾರತೀಯ ಸಾಂಸ್ಕೃತಿಕ ಪ್ರತೀಕ. ಪುರಾಣ ಪ್ರವಚನಗಳನ್ನು ಜನತೆಗೆ ತಲುಪಿಸುವಲ್ಲಿ ಪೌರಾಣಿಕ ನಾಟಕಗಳು ಮಹತ್ವದ ಪಾತ್ರ ವಹಿಸುತ್ತಿವೆ. ಜನರ ಪ್ರೋತ್ಸಾಹ ಸದಾ ಅಗತ್ಯವಿದೆ. ನಾಟಕ ಕಲೆ ಹಾಗೂ ಕಲಾವಿದರನ್ನು ಉಳಿಸಿ ಬೆಳೆಸಬೇಕಾದ ಮಹತ್ತರ ಜವಾಬ್ದಾರಿ ಕಲಾ ಪ್ರೋತ್ಸಾಹಕರ ಮೇಲಿದೆ ಎಂದರು.ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರತ್ನಮ್ಮ ಮಾತನಾಡಿದರು ಮುಖಂಡ ವೀರಣ್ಣ ಬಗರ್‌ಹುಕುಂ ಕಮಿಟಿ ಸದಸ್ಯ ವಾಸುದೇವ್, ಕುಮಾರ್, ಬಂಡೆ ಕುಮಾರ್, ಹನುಮಂತಯ್ಯ, ನವೀನ್, ಚಿದಾನಂದ್, ಗೋವಿಂದ್, ಗುತ್ತಿಗೆದಾರ ಕೇಶವಮೂರ್ತಿ, ಲಕ್ಷ್ಮನಹಳ್ಳಿ ನರಸಿಂಹಮೂರ್ತಿ, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷೆ ಪುಟ್ಟಮ್ಮ, ಮತ್ತಿತರರಿದ್ದರು.

ಶಿಕ್ಷಣ ಇಲಾಖೆ ಕಚೇರಿಗೆ ಪೋಷಕರ ಮುತ್ತಿಗೆ

ಕೆಪಿಎಸ್ ವ್ಯಾಪ್ತಿಯ ಸರ್ಕಾರಿ ಶಾಲೆಗಳನ್ನು ಉಳಿಸುವಂತೆ ಆಗ್ರಹ | ಯಾವುದೇ ಶಾಲೆ ಮುಚ್ಚಲ್ಲ, ಯಾವುದೇ ಶಿಕ್ಷಕರನ್ನು ವರ್ಗಾಯಿಸಲ್ಲ, ಯಾವ ಪೋಷಕರಿಗೂ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಸೇರಿಸುವಂತೆ ಒತ್ತಾಯಿಸುವುದಿಲ್ಲ ಎಂದು ಡಿಡಿಪಿಐ ಸ್ವಾಮಿಯವರಿಂದ ಭರವಸೆ

• **ಕನ್ನಡಪ್ರಭ ವಾರ್ತೆ** ರಾಮನಗರ

ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ವ್ಯಾಪ್ತಿಗಳ ಸರ್ಕಾರಿ ಶಾಲೆಗಳ ಉಳಿವಿಗೆ ಆಗ್ರಹಿಸಿ ತಾಲೂಕಿನ 20ಕ್ಕೂ ಹೆಚ್ಚು ಹಳ್ಳಿಗಳ ಗ್ರಾಮಸ್ಥರು ಹಾಗೂ ಪೋಷಕರು ಮಂಗಳವಾರ ಶಾಲಾ ಶಿಕ್ಷಣ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಪಾದರಹಳ್ಳಿ,ಅವ್ವೇರಹಳ್ಳಿ,ಹಾಗೂಜಾಲಮಂಗಲ ಕರ್ನಾಟಕ ಪಬ್ಲಿಕ್ ಸ್ಕೂಲ್ ವ್ಯಾಪ್ತಿಯ ಕೆಂಪೇಗೌಡನ ದೊಡ್ಡಿ, ತಿಮ್ಮೇಗೌಡನದೊಡ್ಡಿ, ಹರೀಸಂದ್ರ, ಮದರ್‌ಸಾಬರದೊಡ್ಡಿ, ಪಾಲಭೋವಿದೊಡ್ಡಿ, ಕೆ.ಜಿ ಹೊಸಹಳ್ಳಿ, ನೆರಮಲೆ, ಮಟಕಯ್ಯನದೊಡ್ಡಿ, ತಿಮ್ಮೇಗೌಡನದೊಡ್ಡಿ ಸೇರಿ ವಿವಿಧ ಹಳ್ಳಿಗಳಿಂದ ನಗರಕ್ಕೆ ಆಗಮಿಸಿದ ಗ್ರಾಮಸ್ಥರು ಮತ್ತು ಪೋಷಕರು ಮೆರವಣಿಗೆಯಲ್ಲಿ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆ ವಿರುದ್ಧ ಘೋಷಣೆ ಕೂಗುತ್ತಾ ಶಾಲಾಶಿಕ್ಷಣಇಲಾಖೆಕಚೇರಿಗೆಮುತ್ತಿಗೆ ಹಾಕಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸ್ವಾಮಿವರು ಚನ್ನಪಟ್ಟಣದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾರಂಭಿಸುವಸಂಬಂಧಸಭೆಗೆತೆರಳಿದ್ದರು. ಈ ವಿಚಾರ ತಿಳಿದ ಧರಣಿನಿರತರು ಸರ್ಕಾರಿ ಶಾಲೆ ಉಳಿಸಿಕೊಡುವಂತೆ ನಾವು ಮನವಿ ನೀಡುವುದಾಗಿ ಮೊದಲೇತಿಳಿಸಿದ್ದೆವು. ಆದರೂ ಉಪನಿರ್ದೇಶಕರು ಚನ್ನಪಟ್ಟಣಕ್ಕೆ ತೆರಳಿದ್ದಾರೆ. ಆವರೇ ಬಂದು ಮನವಿ ಸ್ವೀಕರಿಸುವವರೆಗೂ ನಾವ್ಹಗಳು ತೆರಳುವುದಿಲ್ಲ ಎಂದು ಹೇಳಿ ಪ್ರತಿಭಟನಾಕಾರರು ಕಚೇರಿ ಆವರಣದೊಳಗೆ ನುಗ್ಗಿ ಧರಣಿ ಕುಳಿತರು.

ಜನಸಾಮಾನ್ಯರ ಬೆನ್ನಿಗೆ ಚೂರಿ: ಧರಣಿನಿರತರನ್ನು ಉದ್ದೇಶಿಸಿ ಮಾತನಾಡಿದ ಎಐಡಿಎಸ್ ಒ ರಾಜ್ಯ ಉಪಾಧ್ಯಕ್ಷ ಅಭಯ ದಿವಾಕರ್, ಸರ್ಕಾರ ತನ್ನ ಮೂಲಕರ್ತವ್ಯವನ್ನು ಮರೆತು, ಜನಸಾಮಾನ್ಯರನ್ನು ಕತ್ತಲೆಗೆ ತಳ್ಳುವ ಹೀನ ಕೆಲಸಕ್ಕೆ ಕೈಹಾಕಿದೆ. ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಇಷ್ಟೊಂದು ದಾಖಲಾತಿ

ರಾಮನಗರದ ಶಾಲಾ ಶಿಕ್ಷಣ ಇಲಾಖೆ ಕಚೇರಿಗೆ ಕರ್ನಾಟಕ ಪಬ್ಲಿಕ್ ಶಾಲೆ ವ್ಯಾಪ್ತಿಯ ಗ್ರಾಮಸ್ಥರು ಮತ್ತು ಪೋಷಕರು ಮುತ್ತಿಗೆ ಹಾಕಿರುವುದು.

ಮಾಡಿಸಿದ್ದೇವೆ ಎಂದು ಕೇವಲ ಆಂಕಿ- ಅಂಶಗಳನ್ನು ಪ್ರದರ್ಶಿಸಲಾಗಿರುವುದು ಶಿಕ್ಷಕರು ಮತ್ತು ಪೋಷಕರ ಮೇಲೆ ತೀವ್ರ ಒತ್ತಡ ಹೇರುತ್ತಿದೆ. ಪೋಷಕರಿಗೆ ಸುಳ್ಳು ಭರವಸೆಗಳನ್ನು ನೀಡಿ, ಸಹಿ ಪಡೆದುಕೊಂಡು, ಊರಾಚೆ ಇರುವ ಕೆಪಿಎಸ್ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವಂತೆ ಬಲವಂತ ಮಾಡುತ್ತಿರುವುದು ಜನಸಾಮಾನ್ಯರ ಬೆನ್ನಿಗೆ ಚೂರಿ ಹಾಕಿದಂತೆ ಎಂದು ಟೀಕಿಸಿದರು.

ನಾವು ಸರ್ಕಾರ ತಂದಿರುವ ಈ ಯೋಜನೆಯ ಸಾಧಕ- ಬಾಧಕಗಳನ್ನು ಚೆನ್ನಾಗಿ ತಿಳಿದುಕೊಂಡೇ ಇಲ್ಲಿಗೆ ಬಂದಿದ್ದೇವೆ. ಯಾರೋ ದಾರಿ ತಪ್ಪಿಸಿ ಬಂದವರಲ್ಲ. ಇದರ ಹಿಂದಿರುವ ಹುನ್ನಾರವನ್ನು ಅರಿತೇ ಈ ನೀತಿಯ ವಿರುದ್ಧ ಧ್ವನಿ ಎತ್ತುತ್ತಿದ್ದೇವೆ. ಹಿಂದೆ ಹೊಂಗಸಂದ್ರನಲ್ಲಿ ಮ್ಯಾಗ್ನೆಟ್ ಯೋಜನೆಗೆ ಒಳಪಡುತ್ತಿದ್ದ ಶಾಲೆಗಳನ್ನು ನಾವು ಹೇಗೆ ಹೋರಾಡಿ ಉಳಿಸಿಕೊಂಡೆವೋ, ಅದೇ ರೀತಿ ನಮ್ಮೂರಿನ ಶಾಲೆಗಳನ್ನೂ ಸಹ ಯಾವುದೇ ಬೆಲೆ ತೆತ್ತಾದರೂ ಉಳಿಸಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸುಮಾರು ಎರಡು ಗಂಟೆಗಳ ತರುವಾಯ ಕಚೇರಿಗೆ ಆಗಮಿಸಿದ ಉಪನಿರ್ದೇಶಕ ಸ್ವಾಮಿ ಅವರಿಗೆ ಎಲ್ಲ ಹಳ್ಳಿಗಳ ಗ್ರಾಮಸ್ಥರು ಮತ್ತು ಪೋಷಕರು ಮನವಿ ಪತ್ರವನ್ನು ಕೊಡುತ್ತಾ ಆ ಊರಿನಲ್ಲಿ ಸರ್ಕಾರಿ ಶಾಲೆ ಏಕೆ ಉಳಿಯಬೇಕೆಂಬುದನ್ನು ಭಾವಪೂರ್ಣವಾಗಿ ತಮ್ಮ ಅಹವಾಲನ್ನು ತೋಡಿಕೊಂಡರು.

ಮನವಿ ಆಲಿಸಿದ ಉಪನಿರ್ದೇಶಕಸ್ವಾಮಿರವರು, ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ, ಯಾವ ಶಿಕ್ಷಕರನ್ನು ವರ್ಗಾಯಿಸುವುದಿಲ್ಲ, ಹಾಗೂ ಯಾವ ಪೋಷಕರನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಸೇರಿಸಲು ತಮ್ಮ ಮಕ್ಕಳನ್ನು ಒತ್ತಾಯಿಸುವುದಿಲ್ಲ ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಎಐಡಿಎಸ್ ಒ ರಾಜ್ಯಾಧ್ಯಕ್ಷೆ ಕೆ.ಎಸ್.ಆಶ್ರಿತಾ, ಕಾರ್ಯದರ್ಶಿಗಳಾದ ಅಜಯ್ ಕಾಮತ್, ಬಿಜಾಂಜಿಗಾಗಾದ ಸುಭಾಷ್ ಬೆಟ್ಟದಕೊಪ್ಪ, ರಾಜ್ಯ ಸೆಕ್ರಟರಿಯೆಟ್ ಸದಸ್ಯರಾದ ಕಲ್ಯಾಣ್ ಕುಮಾರ್, ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಅಧ್ಯಕ್ಷ ಮಂಜುನಾಥ್, ಎಸ್ ಡಿಎಂಸಿ ನಾಯಕರಾದ ಶಂಭು ಗೌಡ, ಉಮೇಶ್, ಹಳ್ಳಿ ಮಟ್ಟದ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ಪರವಾಗಿ ನೂರಾರು ಜನರು ಭಾಗವಹಿಸಿದ್ದರು.

> ನಾವ್ಯಾರು ಕೂಡ ಕೆಪಿಎಸ್ ಮ್ಯಾಗ್ನೆಟ್ ಯೋಜನೆಗೆ ಒಪ್ಪಿಗೆ ಸೂಚಿಸುವುದಿಲ್ಲ. ನಮ್ಮ ಸರ್ಕಾರಕ್ಕೆ ಕನಿಷ್ಠ 10ರಿಂದ 5ರ ವರೆಗೆ ನಮ್ಮೂರಲ್ಲಿ ನಮ್ಮ ಮಕ್ಕಳು ಓದಬೇಕು ಎಂಬ ಪರಿಜ್ಞಾನವೂ ಇಲ್ಲ. ಈಗಾಗಲೇ ಸರ್ಕಾರಿ ಶಾಲೆಗಳಿಲ್ಲಿ ಕೊಠಡಿಗಳಿದ್ದು, ಅವುಗಳನ್ನು ನೀಗಿಸದೆ ಶಾಲೆಗಳನ್ನೇ ಮುಚ್ಚುತ್ತೇವೆ ಎಂದರೆ ಅದು ಒಪ್ಪಲು ಸಾಧ್ಯವೇ ಇಲ್ಲ. ರಾಷ್ಟ್ರೀಯ ಹೆದ್ದಾರಿಯನ್ನು ನಮ್ಮೂರ ಶಾಲೆಗಳಲ್ಲಿ ನಾವು ಕೈಯಾರೆ ಆಚರಿಸಿದ್ದೇವೆ. ಸರ್ಕಾರವಲ್ಲ, ನಮ್ಮೂರ ಶಾಲೆಗಳು ನಮ್ಮೂರಲ್ಲೇ ಇರಬೇಕು. ನಮ್ಮ ಮಕ್ಕಳ ಒಂದು ವರ್ಷದ ಶಿಕ್ಷಣವೂ ವ್ಯರ್ಥವಾದರೂ ಪರವಾಗಿಲ್ಲ, ಮೋಸದ ಮ್ಯಾಗ್ನೆಟ್ ಶಾಲೆಗಳಿಗೆ ನಮ್ಮ ಮಕ್ಕಳನ್ನು ದಾಖಲಿಸುವುದು ನಮಗೆ ಒಪ್ಪಿಗೆ ಇಲ್ಲ.
• **ಮಂಜು,** ಕೋಟಹಳ್ಳಿ

> ನಮ್ಮೂರ ಶಾಲೆಯಲ್ಲಿ 80ಕ್ಕೂ ಹೆಚ್ಚು ಮಕ್ಕಳಿದ್ದಾರೆ. ಇಂಥ ಶಾಲೆಯನ್ನು ಪಾದರಹಳ್ಳಿಗೆ ವಿಲೀನ ಮಾಡಲು ನಿಮಗೆ ನಾಚಿಕೆ ಆಗಬೇಕು. ನಾವು ಕೂಲಿಗೆ ಹೋಗುವವರು. ನಮ್ಮ ಮಕ್ಕಳನ್ನು ಬೆಳಗ್ಗೆ ಬಂದು ಬಸ್ ಗೆ ಹತ್ತಿಸಿದರೆ, ಸಂಜೆ ಇಳಿಸಿಕೊಳ್ಳುವವರು ಯಾರು. ಬಸ್ ನಲ್ಲಿ ಹೋಗುವ ಮಕ್ಕಳು ಸುರಕ್ಷಿತವಾಗಿ ವಾಪಸ್ ಬರುತ್ತಾರೆಂದು ಜವಾಬ್ದಾರಿ ತೆಗೆದುಕೊಳ್ಳುವವರು ಯಾರು? ಎಲ್ಲ ಸೌಕರ್ಯಗಳನ್ನು ನಮ್ಮೂರ ಶಾಲೆಗಳಿಗೆ ಕೊಡಬೇಕೆಂದು ನಮ್ಮ ಆಗ್ರಹ.
• **ರಾಜು,** ಕೆಂಪೇಗೌಡನ ದೊಡ್ಡಿ

> ಕೆಪಿಎಸ್ ಮ್ಯಾಗ್ನೆಟ್ ಯೋಜನೆಯು ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳ್ಳುತಿದೆ ಎಂದು ಎಷ್ಟು ಸುಲಭವಾಗಿ ಇಲ್ಲಿ ಮೇಡಂ ಹೇಳುತ್ತಾರೆ, ಆದರೆ, ನಮ್ಮೂರ ಶಾಲೆಗಳನ್ನು ಏಕೆ ಮುಚ್ಚಬೇಕು. ಊರಾಚೆ ಇರುವ ಮ್ಯಾಗ್ನೆಟ್ ಶಾಲೆಗೆ ಸೌಲಭ್ಯಗಳನ್ನು ಒದಗಿಸುವ ಬದಲು, ಎಲ್ಲಾ ಸೌಲಭ್ಯಗಳನ್ನು ನಮ್ಮೂರ ಶಾಲೆಗೆ ಕೊಡಿ. ನಮ್ಮೂರ ಶಾಲೆ ನಮ್ಮೂರಲ್ಲಿಯೇ ಉಳಿಯಬೇಕು.
• **ತಿಮ್ಮೇಗೌಡನದೊಡ್ಡಿಯ ಹೊರಾಟ ನಿರತ ಮಹಿಳೆ.**

ರಾಮನಗರದ ಶಾಲಾ ಶಿಕ್ಷಣ ಇಲಾಖೆ ಕಚೇರಿಗೆ ಕರ್ನಾಟಕ ಪಬ್ಲಿಕ್ ಶಾಲೆ ವ್ಯಾಪ್ತಿಯ ಗ್ರಾಮಸ್ಥರು ಮತ್ತು ಪೋಷಕರು ಮುತ್ತಿಗೆ ಹಾಕಿರುವುದು.

ವೈದ್ಯರು ಮಾನವೀಯತೆಯೊಂದಿಗೆ ಕರ್ತವ್ಯ ನಿರ್ವಹಿಸಿ

ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಿವಿಮಾತು

• **ಕನ್ನಡಪ್ರಭ ವಾರ್ತೆ** ಹೊಸಕೋಟೆ

ಕಠಿಣ ಪರಿಶ್ರಮ ಹಾಗೂ ಛಲದಿಂದ ಪಡೆದುಕೊಳ್ಳುವ ವೈದ್ಯ ವೃತ್ತಿ ಪವಿತ್ರವಾಗಿದ್ದು, ಮಾನವೀಯ ದೃಷ್ಟಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಎಂವಿಜೆ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆಯಲ್ಲಿ ನಡೆದ 17ನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ವೈದ್ಯಕೀಯ ವೃತ್ತಿ ಕೇವಲ ಚಿಕಿತ್ಸೆ ನೀಡುವುದಲ್ಲದೆ ಸಮಾಜದಲ್ಲಿ ಹೆಚ್ಚಿನ ಜವಾಬ್ದಾರಿ ಹೊಂದಿದೆ. ರೋಗಿಗಳೊಂದಿಗೆ ಸಹಾನುಭೂತಿ ಮತ್ತು ಮಾನವೀಯತೆಯ ವೈದ್ಯರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಜನರು ವೈದ್ಯರನ್ನು ಕೇವಲ ಆರೋಗ್ಯ ಸಮಸ್ಯೆಗಳಿಗಾಗಿ ಮಾತ್ರವಲ್ಲದೆ ವಿಶ್ವಾಸದ ಆಧಾರದ ಮೇಲೆ ಸಂಪರ್ಕಿಸುತ್ತಾರೆ. ಅಷ್ಟೇ ಅಲ್ಲದೆ ಸುಮಾರು 25 ವರ್ಷಗಳಿಂದ ಎಂವಿಜೆ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆ ಸಹಸ್ರಾರು ವೈದ್ಯರನ್ನು ರೂಪಿಸಿ ಕೊಡುಗೆಯಾಗಿ ಕೊಟ್ಟಿದೆ. ಮುಖ್ಯವಾಗಿದೇಶದಲ್ಲಿಸಂಶೋಧನೆಗೆ ಹೆಚ್ಚಿನ ಅವಕಾಶಗಳಿದ್ದು, ವೈದ್ಯರು ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಎಂವಿಜೆ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆಯಲ್ಲಿ ನಡೆದ ಎಂಬಿಬಿಎಸ್ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ವೈದ್ಯರಿಗೆ ಪದವಿ ಪ್ರದಾನ ಮಾಡಿದರು.(ಎಡಚಿತ್ರ).ಆರೋಗ್ಯ ಸಚಿವ ದಿನೇಶ್ ಗುಂಡೂರಾವ್‌ರನ್ನು ಸನ್ಮಾನಿಸಲಾಯಿತು.

ಎಂವಿಜೆ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆಯ ಅಧ್ಯಕ್ಷ ಡಾ.ಎಂ.ಜೆ.ಮೋಸೆಸ್ ಮಾತನಾಡಿ, ಪದವಿ ಪಡೆದ ವೈದ್ಯರು ಇಂದಿನ ತಂತ್ರಜ್ಞಾನಕ್ಕೆ ತಕ್ಕಂತೆ ಕೆಲಸ ಮಾಡುವುದು ಅತಿ ಮುಖ್ಯ. ವೃತ್ತಿಯಲ್ಲಿ ಪ್ರಾಮಾಣಿಕತೆ ಜೊತೆಗೆ ಸೇವಾ ಮನೋಭಾವ ಹೊತ್ತು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ವೈದ್ಯರ ಪ್ರಮಾಣವಚನ ಸ್ವೀಕಾರ, ಉತ್ತಮ ಸಾಧನೆ ಮಾಡಿದ ಹಾಗೂ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಎಂವಿಜೆ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆಯ ಅಧ್ಯಕ್ಷ ಡಾ.ಎಂ.ಜೆ ಮೋಹನ್, ಸಿಇಒ ಧರಣಿ ಮೋಹನ್, ಪ್ರಾಂಶುಪಾಲ ಡಾ.ಬಿ. ರವಿಚಂದ್ರ, ಮೆಡಿಕಲ್ ಸೂಪರಿಂಟೆಂಡ್ ಡಾ. ದಯಾನಂದ್, ಆಡಳಿತ ವೈದ್ಯಾಧಿಕಾರಿಗಳಾದ ಡಾ.ಸೃಮೋದ್, ಡಾ. ಆಂಜನ್ ರೆಡ್ಡಿ, ರೋಟರಿ ಝೋನಲ್ ಅಧ್ಯಕ್ಷ ರಾಜ್ ಕುಮಾರ್, ಹೊಸಕೋಟೆ ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಅಂಬಾ ಸೆಲ್ವಂ ಸೇರಿ ಹಲವಾರು ಗಣ್ಯರು ಹಾಜರಿದ್ದರು.

> **ದೇಶದಲ್ಲಿ ಅನೇಕ ವೈದ್ಯರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಸೇವೆಯನ್ನು ಮುಂದುವರಿಸಿದ್ದಾರೆ. ಮುಖ್ಯವಾಗಿ 12 ರಿಂದ 14 ಜನ ವೈದ್ಯರು ವೈದ್ಯ ವೃತ್ತಿ ಜೊತೆ ಜೊತೆಗೆ ಕಾಸಕರಾಗಿ ನಮ್ಮ ಸರ್ಕಾರದಲ್ಲಿ ನನ್ನ ಜೊತೆ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ವೈದ್ಯರಾದ ನೀವು ಸಹ ವೈದ್ಯಕೀಯ ಕ್ಷೇತ್ರದಲ್ಲಿ ಮತ್ತಷ್ಟು ಉನ್ನತ ವ್ಯಾಸಂಗ ಅಥವಾ ಬೇರೆ ಯಾವುದಾದರೂ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆಯತ್ತ ದಾಪುಗಾಲಿಡಿ.**
• **ದಿನೇಶ್ ಗುಂಡೂರಾವ್,** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರೀಡಾ ವಸತಿ ಶಾಲೆ ಪ್ರವೇಶಕ್ಕೆ ಸೂಚನೆ

ಚಿಕ್ಕಬಳ್ಳಾಪುರ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2026-27 ನೇ ಸಾಲಿನಲ್ಲಿ ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ. ಮಟ್ಟದ ಅರ್ಹ ಕ್ರೀಡಾಪಟು ಗಳನ್ನು ಆಯ್ಕೆ ಮಾಡಿ ಪ್ರವೇಶಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡುವ ದೃಷ್ಟಿಯಿಂದ ರಾಜ್ಯದ ಕೆಲವು ಸ್ಥಳಗಳಲ್ಲಿ ವಿಶೇಷ ಆಯ್ಕೆ ಪ್ರಕ್ರಿಯೆ ಆಯೋಜಿಸಲು ಉದ್ದೇಶಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕಚೇರಿಗೆ ಖುದ್ದು ಭೇಟಿ ನೀಡುವಂತೆ ಅಥವಾ ಮೊ-7204737892 ಗೆ ಸಂಪರ್ಕಿಸಬಹುದು.

ಸಾವಯವ ಕೃಷಿ ಪದ್ಧತಿ ಮಣ್ಣು, ಮನುಷ್ಯರ ಆರೋಗ್ಯಕ್ಕೆ ಪೂರಕ: ಸಂಸದ

• **ಕನ್ನಡಪ್ರಭ ವಾರ್ತೆ** ಕನಕಪುರ

ರೈತರ ನಿಜವಾದ ಪುಸ್ತಕವೆಂದರೆ ಅವರ ಜಮೀನು, ನಿಜವಾದ ಗ್ರಂಥಾಲಯವೆಂದರೆ ಕೃಷಿ ಮತ್ತು ತೋಟಗಾರಿಕೆ ತರಬೇತಿ ಕೇಂದ್ರಗಳು ಎಂದು ಸಂಸದ ಡಾ. ಸಿ. ಎನ್. ಮಂಜುನಾಥ್ ಅಭಿಪ್ರಾಯಿಸಿದರು.

ತಾಲೂಕಿನ ಕೋಡಿಹಳ್ಳಿ ಕೆವಿಕೆ ಎರ್‌ಟಿಸಿ ಬಸ್‌ನಿಲ್ದಾಣದ ಹಿಂದಿರುವ ರಂಗಮಂದಿರದಲ್ಲಿ ಐಸಿಎಆರ್- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರ್‌ರೀಸರ್ಚ್ ಬೆಂಗಳೂರು, ಕನಕಪುರ ಆರ್‌ಗಾನಿಕ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ ಹಾಗೂ ಕೋಡಿಹಳ್ಳಿ ರೇಷ್ಮೆ ಕೃಷಿ ರೈತ ಉತ್ಪಾದಕ ಕಂಪನಿ ಸಂಯುಕ್ತಾಶ್ರಯದಲ್ಲಿ ಗೊಬ್ಬರಗಳ ಸಮತೋಲಿತ ಬಳಕೆ ಮತ್ತು ಸಮಗ್ರ ಮಣ್ಣಿನ ಆರೋಗ್ಯ ನಿರ್ವಹಣೆ ಕುರಿತು ರಾಷ್ಟ್ರೀಯ ಜಾಗೃತಿ ಮತ್ತು ಸಂವೇದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ದೇಶದ ಜನರ ಆರೋಗ್ಯ ಸುಸ್ಥಿತಿವಾಗಿರಲು ಗ್ರಾಮೀಣ ಆರ್ಥಿಕತೆ ಬಲವಾಗಬೇಕಾದರೆ ಗ್ರಾಮೀಣ ಆರ್ಥಿಕತೆ ಬಲವ